CONQUER
GENERAL
SEXUAL
DEBILITIES
WITH
SHAKTI
SUDHA

Reg No. M 1299 (Founded 1917) Daily & Weekly

ಸತ್ಯವಾದಿ
SATYAVADI

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 28 ಸಂಚಿಕೆ 119] ಬುಧವಾರ 31—1—45 [3 ಪೈ

ಅಕ್ಕ ಸಾಮಾಜಿಕ
ಭಾವಪರಿಪೂರ್ಣವಾದ ಕಥೆ
ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ ವರೆಗೂ ಊಟಕ್ಕೆ ಕೂಡ ಏಳಲು ಮನ ಸ್ಸಾಗುವುದಿಲ್ಲ. ಬೆಲೆ 6 ಆಣೆ, ವೀ ಪೆಸಿ ಜು 1 ಆಣೆ. ಮುಂಗಡ ಕಳುಹಿಸಬೇಕು,
ದೊರೆಯುವ ಸ್ಥಳ—
ಸತ್ಯವಾದಿ ಆಫೀಸ್, ಮೈಸೂರು

ಸಂಸ್ಥಾನದ ಸುದ್ದಿಗಳು

ಉತ್ತರ ದೇಶದಿಂದ ಕಾಲು ನಡಿಗೆ ಯಿಂದಲೇ ರಾಜಧಾನಿಗೆ ದಯಮಾಡಿಸಿ ರುವ ಜೈನ ಶ್ವೇತಾಂಬರ ಗುರುಗಳಾದ ಶ್ರೀ ಗಣೇಶ ಲಾಲಜಿ ಮಹಾರಾಜ್‌ಸವರು 'ಬ್ರಹ್ಮಚರ್ಯ'ದ ಮೇಲೆ ನಿನ್ನೆ ಟೌನ್‌ಹಾಲಿನಲ್ಲಿ ಹಿಂದಿ ಭಾಷೆಯಲ್ಲಿ ಒಂದು ಅಮೋಘ ಭಾಷಣ ಮಾಡಿದರು. ನೂರಾರು ಜನರು ಭಾಷಣವನ್ನು ಕೇಳಿ ಆನಂದಿಸಿದರು. ನಿವೃತ್ತ ವಿದ್ಯಾ ಇಲಾಖಾ ಅಧಿಕಾರಿಗಳಾದ ಶ್ರೀ ಎ. ವಾಸುದೇವಂತಾಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಗುರುಜಿಯವರು ಮತ್ತೆ 'ಬ್ರಹ್ಮಚರ್ಯ'ದ ವಿಷಯವಾಗಿ ನಾಳೆಯೂ ಟೌನ್‌ಹಾಲಿನಲ್ಲಿ ಉಪನ್ಯಾಸ ಮಾಡುವರು.

ರಾಜಧಾನಿಯಲ್ಲಿ ಧನಿಯು ರೂ. 22 ರಿಂದ ರೂ. 30 ರವರಿಗೂ ಏಕದಂ ಏರಿದೆ. ಧಾನ್ಯಗಳ ಹತೋಟಿ ಅಗತ್ಯವಲ್ಲವೆ?

ನಿವೃತ್ತ ವ್ಯವಸಾಯ ಇಲಾಖೆಯ ಡೈರೆಕ್ಟರು ಶ್ರೀ ಟಿ. ಜಿ. ರಾಮಯ್ಯಂಗಾರ್ಯರವರು ಬಿಕನೀರು ಸಂಸ್ಥಾನದ ಗ್ರಾಮ ಪುನರ್ರಚನಾ ಕಾರ್ಯದ ಸಚಿವರಾಗಿ ನೇಮಿಸಲ್ಪಟ್ಟಿರುವರೆಂದು ತಿಳಿಯಬಂದಿದೆ.

ಫಿರ್ಯಾದಿ ಮತ್ತು ಅನಾದಿತರು ರಾಜಿ ಮಾಡಿಕೊಂಡ ಪ್ರಯುಕ್ತ ಶ್ರೀ ಕೆ. ಚಿನಣ್ಣರಾಯರು ಖುಲಾಸೆಯಾದರು

ಚಿಂತಾಮಣಿ ತಾಲ್ಲೂ ಚಿನ್ನಸಂದ್ರ ಗ್ರಾಮದಲ್ಲಿ ಲೈಸೆನ್ಸಿಲ್ಲದೆ ಚರಕದಿಂಪ ಪ್ಲೇಜ್ಮೆ ತೆಗೆಯುತ್ತಿದ್ದರೆಂದು ಪೋಲೀಸಿನವರು ಜಡ್ತಿ ಮಾಡುವ ಸಂದರ್ಭದಲ್ಲಿ --9 ಮಂದಿ ಪೋಲೀಸಿನವರಿಗೆ ಎದುರು ಕತೆಮಾಡಿದರಿಂದ ಎಟು ಬಿತ್ತು. 4 ಮಂದಿಗೆ ತುಂಬಾ ಗಾಯವಾಯಿತು. ಈ ಸಂದರ್ಭದಲ್ಲಿ 45 ಜನರು ದಸ್ತಗಿರಿ ಮಾಡಲ್ಪಟ್ಟಿದ್ದಾರೆ.

ಜರ್ನರ ದುರವಸ್ಥೆ

ನಾಜಿ ಮಂತ್ರಿಗಳು ಬರ್ಲಿನ್ ಬಿಟ್ಟು ಬವೇರಿಯಾ ಮತ್ತು ಡ. ಜರ್ಮನಿಗೆ ಹೊರಟರು.

ಜರ್ಮನರು ವಿಷಗಾಳಿ ಉಪಯೋಗಿಸುವ ಕಾಲ ಸಮೀಪಿಸಿದೆಯೆಂತೆ.

ಬರ್ಲಿನ್ನಿನಲ್ಲಿ ಈಗ ನಮ್ಮ ಮೈಸೂರು ನಗರದಲ್ಲಿನ ಪತ್ರಿಕೆಗಳಂತೆ ಎರಡು ಪುಟದ (3 ಕಾಸು ?) ಪತ್ರಿಕೆಗಳು ಹೊರಡಲು ಪ್ರಾರಂಭವಾಯಿತು.

ಟ್ವಿಸ್ ವಾರ್ತೆಯೊಂದು 'ಜಪಾನು ಶಾಂತಿ ಬಿಕ್ಷೆ ಬೇಡಿದೆ' ಎಂದು ತಿಳಿಸುತ್ತದೆ.

ತ್ರಿಮೂರ್ತಿಗಳ ಸಮ್ಮೇಳನಕ್ಕೆ ಬರಲಿಕ್ಕುವ ಕೂಸ್ವೆಲ್ಟರಿಗೆ ಅಣೆಮಾಡಲು ಕಾರ್ಯದರ್ಶಿ ಹಾಪ್ಕಿನ್ಸ್ ಲಂಡನ್ನಿಗೆ ಬಂದಿರುತ್ತಾನೆ.

ಉತ್ತರ ದಕ್ಷಿಣ ಅಮೇರಿಕಾ, ಬ್ರಿಟಿಷ್ ದ್ವೀಪಗಳು, ಇವೆಲ್ಲಾ ಸಂಯುಕ್ತ ಅಮೇರಿಕಾಕ್ಕೆ ಸೇರಬೇಕು ; ಇಂಗ್ಲೆಂಡು ಎಂದಿದ್ದರೂ ಸಣ್ಣ ರಾಜ್ಯವಾಗುವುದು ; ಯೂರೋಪಿನ ಮೂಲೆಯಲ್ಲಿರುವುದು ; ಇದರಿಂದ ಮುಂಪೆ ಮಹಾ ತೊಂದರೆಗಳೆಲ್ಲಾ ಮಾಯವಾಗುವುದು, ಎಂದು ಸೆನೇಟರ್ ಲಾಂಗರ್ವರು ಅಮೆರಿಕಾ ಸೆನೇಟಿನಲ್ಲಿ ಒಂದು ಪ್ರಶ್ನೆ ಕೇಳಿರುವರು.

ಗಾಂಧೀಜಿಯವರು ವೈಸರಾಯರನ್ನು ಫೆಬ್ರವರಿ ಮೊದಲನೆ ವಾರದಲ್ಲಿ ಕಾಣುವರಂತೆ.

ದ. ಆಫ್ರಿಕಾದಲ್ಲಿ ರೇಷನ್‌ಇಂಗ್ ಮಾಡುವ ಯೋಚನೆ ಇದೆ.

ಕಾಂಗ್ರೆಸ್ ಬಾವುಟವನ್ನು ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಕಟ್ಟಡದ ಮೇಲೆ ಇಡಲಾಗಿದೆ.

ಕಸ್ತೂರಿ ಬಾ ನಿಧಿಗೆ ಈಗ 124 ಲಕ್ಷ ರೂ. ಶೇಖರವಾಗಿದೆ.

ಬೊಂಬಾಯಿನಲ್ಲಿ ಇನ್ನು ಮುಂದೆ ನೂಲನ್ನು ನೆಯ್ಗೆಯವರಿಗೆ ಸರಕಾರದ ವತಿ ಯಿಂದ ವಿತರಿ ಮಾಡುವರು.

ಅಹಮದಾಬಾದಿನಲ್ಲಿ 'ಚಿತ್ರಾ' ಎಂಬ ಸಿನಿಮಾ ವಾರಪತ್ರಿಕೆಯ 3800 ಪ್ರತಿಗಳನ್ನು ಪೋಲೀಸಿನವರು ವಶಪಡಿಸಿಕೊಂಡರು. ಇವರು ತಮಗೆ ಕೊಟ್ಟಿದ್ದ ಪ್ರಮಾಣಕ್ಕಿಂತ ಹೆಚ್ಚು ಕಾಗದ ಉಪಯೋಗಿಸಿದುದೇ ಕಾರಣವು.

ಭಾರತದ ನಾನಾ ಭಾಗಗಳ ಪ್ರಜೆಗಳ ಬೇಡಿಕೆಗೆ ಮನ್ನಣೆ ಕೊಟ್ಟು ಮಧ್ಯ ಪ್ರಾಂತ್ಯ ಮತ್ತು ಬೀರಾರು ಗ್ರಾಮರಡು ಅಷ್ಟಿ ಮತ್ತು ಜೀಮೂರು ಮೊಹದ್ದಮೆಯ 8 ಮಂದಿಗೆ ಮರಣದಂಡನೆ ವಜಾ ಮಾಡಿ ಜೀವಾವಧಿ ಗಡಿಪಾರು ಶಿಕ್ಷೆಯನ್ನು ವಿಧಿಸಿರುವರು.

ವಿವಿಧ ವರ್ತಮಾನ

ಲಗ್ನಕಾಲದಲ್ಲಿ ರೇಷ್ಮೆ ಸೀರೆ ಅವಶ್ಯಕವಾದುದರಿಂದ, ಬಾರತದಿಂದ ಸಿಂಹಳ ದ್ವೀಪಕ್ಕೆ ರೇಷ್ಮೆಬಟ್ಟೆ ಆಮದು ಮಾಡದಿರುವುದರಿಂದ, ಸಿಂಹಳದ್ವೀಪದ ಹಿಂದೂಗಳಿಗೆ ಕಷ್ಟವಾಗಿದೆಯೆಂದೂ, ಇದನ್ನು ತಪ್ಪಿಸಬೇಕೆಂದೂ ಅಲ್ಲಿಯ ನ್ಯಾಯ ವಿಧಾಯಕ ಸಭೆಯಲ್ಲಿ ಒಬ್ಬರು ಪ್ರಶ್ನೆ ಕೇಳಿರುತ್ತಾರೆ. ಮುದರಾಸಿನಲ್ಲಿ

ಅಸೆಲು ಕ್ಯಾಯಕ್ಕೆ ಶೇಕಡ 300 ಹೆಚ್ಚಾ ಸ್ಟೆಬಿಲಿಗೆ ಕಬ್ಬಿಣ ಮಾರಿದರಿಂದು 4 ಜನರಿಗೆ ತಲಾ ರೂ. 2000 ಜುಲ್ಮಾನೆ ಯಾಯಿತು.

ತುಂಗಭದ್ರಾ ನೀರಿನ ಸಾಜೆಕ್ಟಿನ ಅಸ್ಮಿಭಾರವನ್ನು ಮುದರಾಸು ಗೌರ್ನರರು 28-2-45 ರಲ್ಲಿ ಹೊಸಪೇಟೆಗೆ 6 ಮೈಲಿ ದೂರದಲ್ಲಿರುವ ಮಲ್ಲಾಪುರಂನಲ್ಲಿ ಹಾಕುವರು. ಅದೇ ದಿವಸ ನೈಜಾಮರು ತಮ್ಮ ಸಂಸ್ಥಾನದಲ್ಲಿ ಪ್ರತಿಷ್ಠಿಸುವರು

ಮೈಸೂರಿನ ಜಟಕಾ ಮುಸ್ಕರ ನಿಂತಿತು. ವೈಸ್‌ಪ್ರೆಸಿಡೆಂಟ್ ಶ್ರೀ ಟಿ.ವೆಂಕಟರಮಣಯ್ಯನವರು, ಟಾಂಗಾದವರು ಈಗಿನ ಕೇಟಿಗೆ 2 ಆಣೆ ಹೆಚ್ಚಿಸಬಹುದೆಂದೂ ಅವರ ಕಷ್ಟಗಳನ್ನು ಲಿಖಿತ ಮೂಲಕ ತಿಳಿಸಿದರೆ ಯೋಚಿಸಲಾಗುವುದೆಂದೂ ಹೇಳಿದರು ; ಮುಸ್ಕರ ನಿಂತಿತು.

ಈ ದಿವಸ್ಯ ನಡೆದ ರಾಜಧಾನಿಯ ಟ್ರಸ್ಟ್ ಬೋರ್ಡು ಮೀಟಿಂಗಿನಲ್ಲಿ, ಕಿಲ್ಪೇ ಮೊಹಲ್ಲಾದಲ್ಲಿರುವ ನೂಡಲ್ಸ್ ಹೌಸುಗಳ ಬಳಿಯಿರುವ ಎಲೆ ತೋಟವನ್ನು ತೆಗೆದುಕೊಳ್ಳಬೇಕೆಂದು ನಿರ್ಣಯ ಮಾಡಿದರು

ಮೈಸೂರು ರಣಜಿತ್ ಟಾಕೀಸಿನಲ್ಲಿ 3 ನೇ ವಾರ

At Ranjit ತಕದಿರ್

(ಹಿಂದಿ)

ಚಂದ್ರಮೋಹನ್ — ಮೋತಿಲಾಲ್ — ನರ್ಗೀಸ್

ಬಾಲ್ಕಿ

ಮುಂತಾದವರು ಪಾತ್ರವಹಿಸಿರುವರು

— ದಿನವಹಿ ಮೂರು ಆಟಗಳು —

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ನೇವನೆಯೇ ಸುಲಭೋಪಾಯ

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.

ಬೇಕಾಗಿದಾರೆ.

ಸತ್ಯವಾದಿ ವಾರದಸಂಚಿಕೆ ಎಲ್ಲಾ ಊರುಗಳಲ್ಲೂ ಏಜಂಟರುಗಳು ಬೇಕಾಗಿದ್ದಾರೆ. ಹೆಚ್ಚಿನ ವಿಷಯಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್, ಸತ್ಯವಾದಿ
ಚಾಮರಾಜಪುರಂ, ಮೈಸೂರು

Good Coffee

Sastry's Coffee Rooms
Chamarajapuram, Mysore

TALK-A-TONE

(The Pioneer Film-mag of S. India)

Local Agent—D. Mahaadev
Opera Talkies, Mysore

For Good Printing—

L. N. Press

Srirampet MYSORE

ಮೈಸೂರು ಸಿಟಿ ರೇಷನಿಂಗ್ ಆಫೀಸಿನಿಂದ

No. R 5. 1080 / 44-45

ಇಸ್ತಿಹಾರ್ ನಾಮೆ

ಇದರಿಂದ ಸಮಸ್ತ ಜನಗಳಿಗೆ ತಿಳಿಯುಪಡಿಸುವುದೇನೆಂದರೆ—

ಲಷ್ಕರ್ ಎಮರ್ಜನ್ಸಿ ಡಿಪೋವಿನಲ್ಲಿ ರತಕ್ಕ 141 ಪಲ್ಲಾ 95 ಸೇರು ಹಸಿಕಡಲೆಯನ್ನು ಈ ಕೆಳಗೆ ರುಜು ಮಾಡಲ್ಪಟ್ಟಿರುವರಿಂದ 5-2-45 ನೇ ತಾರೀಖಿನ ದಿವಸ ಬೆಳಿಗ್ಗೆ 11 ಘಂಟೆಗೆ. ಮೇಲೆ ಹೇಳಿರುವ ಡಿಪೋವಿನಲ್ಲಿ ಒಹಿರಂಗವಾಗಿ ಹರಾಜುಮಾಡಲ್ಪಡುತ್ತದೆ.

ಹರಾಜು ಖೈದಾದ ಮೇಲೆ ಅಖೈರು ಬಿಡ್ಡುದಾರ್ರು ಪೂರ್ತಾಮೊಬಲಗನ್ನು ಸ್ಥಳದಲ್ಲಿಯೇ ಸಾವತಿ ಮಾಡಶಕ್ಕದ್ದು. ಹಾಗೆ ಮೊಬಲಗನ್ನು ಹಾಜರ್ಮಾಡಲು ತಪ್ಪಿದಲ್ಲಿ ದುಸರಾ ಹರಾಜು ಮಾಡಿಸಿ ಅದರಿಂದಾಗುವ ನಷ್ಟವನ್ನು ಮೊದಲಿನ ಬಿಡ್ಡುದಾರವಿಂದ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುತ್ತದೆ. ಅದರಿ ದುಸರ ಹರಾಜಿನಲ್ಲಿ ಹೆಚ್ಚಿಗೆ ಉತ್ಪತ್ತಿಯಾದಲ್ಲಿ ಮೊದಲಿನ ಬಿಡ್ಡುದಾರರಿಗೆ ಯಾವ ವಿಧವಾದ ಫಾಯಿದೆಯೂ ಕೊಡಲ್ಪಡುವುದಿಲ್ಲ.

ಈ ಸರಕನ್ನು ನೋಡಲು ಲಷ್ಕರ್ ಎಮರ್ಜನ್ಸಿ ಡಿಪೋವಿನಲ್ಲಿ 1-2-45 ನೇ ತಾರೀಖಿನಲಾಗಾಯ್ತು ಇಡಲ್ಪಡುತ್ತದೆ.

ಈ ಹರಾಜನ್ನು ಮಂಜೂರು ಮಾಡಿದ ಏಳು ದಿವಸಗಳೊಳಗೆ ಸರಕನ್ನು ಸುಫರ್ದು ಪಡೆಯಬೇಕಕ್ಕದ್ದು.

ಟಿ. ವಿ. ರೆಡ್ಡಿ
ರೇಷನಿಂಗ್ ಆಫೀಸರ್, ಮೈಸೂರು.

ಮೈಸೂರು ನಗರದ ರಾಷ್ಟ್ರೀಯ ರಕ್ಷಣಾಬಲ

ಮೈಸೂರು ನಗರದ ರಾಷ್ಟ್ರೀಯ ರಕ್ಷಣಾಬಲ ಸಂಸ್ಥೆಯ ಶ್ರೀ ಕೆ. ಆರ್. ಗುಂಡೂರಾಯರು ನಿನ್ನೆ ಸಾಯಂಕಾಲ ಚೆಲುವಾಂಬಾ ಅಗ್ರಹಾರದಲ್ಲಿ ಸಭೆಯೊಂದನ್ನೇರ್ಪಡಿಸಿ ಮ್ಯಾಜಿಕ್‌ಲ್ಯಾಂಟರ್ನ್ ಚಿತ್ರಪಠಗಳ ಮೂಲಕ ಭಾರತೀಯ ಸೈನೀಕರ ಸಾಹಸಕಾರ್ಯಗಳು, ಯುದ್ಧೋದ್ಯಮ ಕೈಗಾರಿಕೆಗಳು ಮುಂತಾದ ವಿಷಯಗಳ ಮೇಲೆ ಉಪನ್ಯಾಸ ಮಾಡಿದರು. ಸುಳ್ಳುಸುದ್ದಿಗಳನ್ನು ಹರಡಬಾರದಾಗಿಯೂ, ತರಕಾರಿಗಳನ್ನು ಮನೆಯ ಹಿತ್ತಲಲ್ಲಿ ಬೆಳೆಯಬೇಕೆಂದೂ ಮಿತವ್ಯಯದ ಅಭ್ಯಾಸಗಳನ್ನು ಸರ್ವರೂ ಆಚರಣೆಗೆ ತರಬೇಕೆಂದೂ, ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು ಸರ್ವರೂ ಕೊಂಡುಕೊಳ್ಳಬೇಕೆಂದೂ ಸಭಿಕರನ್ನು ಪ್ರಾರ್ಥಿಸಲಾಯಿತು.

ಲಾಟರಿಗಳು

ಕೇಂದ್ರ ಸರಕಾರದ ರೂ. 100 ಸಾಲ ಪತ್ರವನ್ನು ಕೊಳ್ಳುವವರಿಗೆ ಬಡ್ಡಿ ಬದಲು 6 ತಿಂಗಳಿಗೆ ಒಂದಾವರ್ತಿ ಲಾಟರಿ ಎತ್ತುತ್ತಾರು. ಈಚೆಗೆ ಎತ್ತಿದ ಲಾಟರಿಯಲ್ಲಿ ನೊದಲನೆ ಬಹುಮಾನವಾದ 50 ಸಾವಿರ ರೂ. ಫೆಡರಲ್ ಕೋರ್ಟಿನ ಅಡ್ವೊಕೇಟ್ ಜನರಲ್ಲರವರ ಮಕ್ಕಳು ಶ್ರೀಮಂತರಿಗೆ ದೊರೆಯಿತು. ಹೊಳೆಯುನೀರು ಹೊಳೆಗೆ ತಾನೇ ?

ಹಿಂದೆ ಮುದರಾಸಿನ ವೈಟ್‌ವೆಲೇಡ್ಲಾ ಕಂಪೆನಿಯಲ್ಲಿ 1 ರೂ. ಸಾಮಾನು ಕೊಂಡ ಲಾಟರಿಯಲ್ಲಿ (5 ನೇ ಜಾರ್ಜ್ ಕಿರೀಟಕ್ಕೆ) ಹೈದರಾಬಾದಿನ ಯುವರಾಣಿಯವರಿಗೆ ನೊದಲನೆ ಬಹುಮಾನ ಬಂದಿತು, ಆ ಬಹುಮಾನ ಹೈದರಾಬಾದಿನಿಂದ ಲಂಡನ್ನಿಗೆ ವಿಮಾನದಲ್ಲಿ ಹೋಗಿ ಬರುವುದು. ಅಲ್ಲಿ ಉತ್ತಮ ಹೋಟಲಿನಲ್ಲಿ ಊಟ, ಉತ್ತಮ ಜಾಗದಲ್ಲಿ ನಿಂತು ಉತ್ಸವ ನೋಡುವುದು.

ಅಪೆರಾ ಟಾಕೀಸ್ 3ನೇವಾರ

ಮಹಾಮಾಯ

ಹಿ. ಕನ್ಯಾಂಬಾ, ಪಿ. ವಿ. ಚಿನ್ನಪ್ಪ, ಎಂ. ಎಸ್. ಸರೋಜ
ಕೃಷ್ಣ, ಮಧುರಂ ಪಾತ್ರವಹಿಸಿರುವರು.

— ಶೀಘ್ರದಲ್ಲೇ ಬರುತ್ತದೆ —

ವೈ. ವಿ. ರಾವ್, ಕಮಲಾ ಕೊಟ್ನಿಸ್, ಭಾನುಮತಿ, ನಾರಾಯಣರಾವ್
ಪಾತ್ರವಹಿಸಿರುವ

ತಹಸಿಲ್ದಾರ್

(ತೆಲುಗು ಚಿತ್ರ)

ಅಂದವಾದ ಹೊಲಿಗೆಗೆ
ರೆಡಿಮೇಡ್ ಬಟ್ಟೆಗೆ
— ನಮ್ಮಲ್ಲಿ ಬನ್ನಿ —
ಶ್ರೀ ಮಹಾಲಕ್ಷ್ಮಿ ಹಾಲ್
ಸಯ್ಯಾಜಿರಾವ್ ರಸ್ತೆ, ಮೈಸೂರು

ಸತ್ಯವಾದಿ
— ವಾರದ ಸಂಚಿಕೆ —
ಪರವರ್ಷಕ್ಕೆ ವಾರ್ಷಿಕ ಚಂದಾ
ಅಂಚೆವೆಚ್ಚ ಸೇರಿ ರೂ. 1-12-0

ಚಿನ್ನಾ ಬೆಳ್ಳಿ ಧಾರಣೆ

ಸವರ್ನ 1 ಕ್ಕೆ	ರೂ. 45-0-0
ಚಿನ್ನ ತೊಲ 1 ಕ್ಕೆ	64-8-0
ಬೆಳ್ಳಿ "	1-4-3

Edited, Printed and published by M. S. Krishna Rao, at the Satyavadi Press, Chamaraja Agrahar, Mysore